ದ್ವೀಪಗಳಲ್ಲಿ 'ಗೇಬಿಯಲ್ ಸ್ಟ್ರಕ್ಚರ್' ಮಾದರಿಯ ತಡೆಗೋಡೆ ನಿರ್ಮಿಸಲಾಗುತ್ತಿದೆ. ಅಂದರೆ ದ್ವೀಪದ ಸುತ್ತ ಕಲ್ಲು, ಮಣ್ಣು ಸುರಿದು ಭದ್ರ ಮಾಡಲಾಗುತ್ತಿದೆ. ದ್ವೀಪಗಳಿಗೆ ಸೀರೆ ಉಡಿಸಿದಂತೆ, ಜಾಲರಿಗಳನ್ನು ಅಳವಡಿಸಲಾಗುತ್ತಿದೆ. ಈ ಪ್ರಯೋಗ ಯಶಸ್ವಿಯಾದರೆ ಹಂತ ಹಂತವಾಗಿ ಎಲ್ಲ ದ್ವೀಪಗಳಿಗೂ ವಿಸ್ತರಣೆ ಮಾಡಲಾಗುತ್ತದೆ ಎನ್ನುತ್ತಾರೆ ಪ್ರಭುಗೌಡ.

### ಪಕ್ಷಿಗಳಿಗೂ ತಾಯಿ ಕಾವೇರಿ ನದಿ

ಈ ದ್ವೀಪಗಳಲ್ಲಿ ಹೊಳೆಮತ್ತಿ, ನೀರಂಜಿ, ನೇರಳೆ, ಆಲ, ಹೊಂಗೆ, ಬಿದಿರು, ಹತ್ತಿ, ರೈನ್ ಟ್ರೀ ಮುಂತಾದ ಮರಗಳಿವೆ. ಇವುಗಳ ರೆಂಬೆ ಕೊಂಬೆಗಳ ಮೇಲೆ ಪಕ್ಷಿಗಳು ಗೂಡು ಕಟ್ಟುತ್ತವೆ. 30 ಪ್ರಭೇದಗಳ ಜೊಂಡು, ಹಲವಾರು ತರಹದ ಜಲಸಸ್ಯಗಳು, ಹೂವು ಬಿಡದ ಜರಿಸಸ್ಯಗಳು ಇಲ್ಲಿನ ವಿಶೇಷ. ಪಕ್ಷಿಗಳ ಪಾಲಿಗೆ ಪೊರೆಯುವ ತಾಯಿಯೆಂದರೆ ಅದು ಕಾವೇರಿ ನದಿ.

ಮೈಸೂರು ಮಹಾರಾಜರು 1645–48ರ ಸಮಯದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿದ ಬಂಗಾರದೊಡ್ಡಿ ಅಣೆಕಟ್ಟೆಯಿಂದ ಈ ನೆಲದಲ್ಲಿ ಪಕ್ಷಿಗಳ ಸ್ವರ್ಗವೇ ಸೃಷ್ಟಿಯಾದೀತು ಎಂದು ಯಾರು ಕಂಡಿದ್ದರು? ಶ್ರೀಕಂಠೀರವ ನರಸರಾಜ ಒಡೆಯರ್ ಕಟ್ಟಿಸಿದ ಕಟ್ಟೆಯಿಂದಾಗಿ ಕಾವೇರಿ ನದಿಯಲ್ಲಿ ಅನೇಕ ಕಿರುದ್ವೀಪಗಳು ಸಹಜವಾಗಿ ಸೃಷ್ಟಿಯಾದವು. ಈ ಹೊಸ ದ್ವೀಪಗಳು ಸ್ಥಳೀಯ ಪಕ್ಷಿಗಳಾದ ಕೊಕ್ಕರೆ, ಬೆಳ್ಳಕ್ಕಿ, ಹೆಜ್ಜಾರ್ಲೆ, ನೀರುಕಾಗೆ ಹಾಗೂ ಇತರೆ ಜಲಪಕ್ಷಿಗಳಿಗೆ ಗೂಡು ಕಟ್ಟಲು ಮತ್ತು ತಂಗಲು ನೆಲೆಯಾದವು. ನದಿಯಲ್ಲಿನ ಮೀನು ಮತ್ತು ಅಕ್ಕಪಕ್ಕದ ಗದ್ದೆಗಳಲ್ಲಿ ಹೇರಳವಾಗಿ ಸಿಗುವ ಜಲಚರ ಅಕಶೇರುಕಗಳು ಪಕ್ಷಿಗಳ ಪ್ರಮುಖ ಆಹಾರವಾಗಿವೆ.

### 221 ಪ್ರಭೇದಗಳು

ರಂಗನತಿಟ್ಟು ಪಕ್ಷಿಪ್ರಿಯರ ಪಾಲಿಗೆ ಸ್ವರ್ಗ. ಈ ಪಕ್ಷಿಧಾಮವು 67.49 ಹೆಕ್ಟೇರ್ ವಿಸ್ತೀರ್ಣ ಒಳಗೊಂಡಿದೆ. 221ಕ್ಕೂ ಅಧಿಕ ಪಕ್ಷಿ ಪ್ರಭೇದಗಳಿಗೆ ಆಶ್ರಯ ನೀಡಿರುವ ರಂಗನತಿಟ್ಟು 'ಜೀವಸಂಕುಲದ ತೊಟ್ಟಿಲು' ಎನಿಸಿದೆ. ನವೆಂಬರ್, ಡಿಸೆಂಬರ್ ತಿಂಗಳಲ್ಲಿ

### 'ರಾಮ್‌ಸರ್' ತಾಣದ ಮಾನ್ಯತೆ

2022ರಲ್ಲಿ ಕರ್ನಾಟಕದ ಮೊದಲ 'ರಾಮ್‌ಸರ್' ಸೈಟ್ ಪಟ್ಟಿಗೆ ಸೇರಿದ ಜೌಗು ಪ್ರದೇಶ (ವೆಟ್ ಲ್ಯಾಂಡ್) ಹಾಗೂ ಬರ್ಡ್ ಲೈಫ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ 'ಪ್ರಮುಖ ಪಕ್ಷಿ ಮತ್ತು ಜೀವವೈವಿಧ್ಯ ತಾಣ' (ಐ.ಬಿ.ಎ) ಎಂಬ ಮಾನ್ಯತೆಗಳು ರಂಗನತಿಟ್ಟು ಪಕ್ಷಿಧಾಮಕ್ಕೆ ಸಿಕ್ಕ ಎರಡು ವಿಶೇಷ ಗರಿಗಳು.

'ಜೌಗುತಾಣ' ಎಂದರೆ ವರ್ಷದ ಬಹುಪಾಲು ಅಥವಾ ಶಾಶ್ವತವಾಗಿ ನೀರು ನಿಂತಿರುವ, ಜಲಸಂತೃಪ್ತ ಮಣ್ಣನ್ನು ಹೊಂದಿರುವ ಭೂಮಿ ಮತ್ತು ಜಲಚರ ಪರಿಸರ ವ್ಯವಸ್ಥೆಗಳ ನಡುವಿನ ಪರಿವರ್ತನೆಯ ಪ್ರದೇಶ ಎಂದರ್ಥ. ಪರಿಸರವನ್ನು ಶುದ್ಧೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಜೌಗುತಾಣಗಳನ್ನು 'ಪ್ರಕೃತಿಯ ಮೂತ್ರಪಿಂಡಗಳು' ಎಂದು ಕರೆಯಲಾಗುತ್ತದೆ.



ಗೂಡು ಕಟ್ಟಲು ಪುಟ್ಟ ಟೊಂಗೆ ತರುತ್ತಿರುವ ಬಾಯ್ಕಳಕ ಕೊಕ್ಕರೆ



ಪಕ್ಷಿಧಾಮದಲ್ಲಿ ಬೀಡು ಬಿಟ್ಟಿರುವ ಪೆಲಿಕಾನ್‌ಗಳು